KACD510013502023

Presented on : 28-07-2023
Registered on : 28-07-2023
Decided on : 01-04-2026
Duration : 2 years, 8 months, 4 days

## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

**ದಿನಾಂಕಃ 41 ನೇ ಏಪ್ರಿಲ್ ಮಾಹೆ, 2026 ನೇ ಇಸವಿ**

: ಉಪಸ್ಥಿತರು :

**ಶ್ರೀ ಪ್ರಸನ್ನ ಕುಮಾರ್ ಸಿ.,**

**ಬಿ.ಎ.ಎಲ್. ಎಲ್.ಎಲ್.ಬಿ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.

## ಸಿ.ಸಿ. ಸಂಖ್ಯೆಃ 575/2023

ರಾಜ್ಯದ ಪರವಾಗಿ
ಹೊಸದುರ್ಗ ಪೋಲೀಸರು,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ. .....ಫಿರ್ಯಾದುದಾರರು

**(ಫಿರ್ಯಾದುದಾರರ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿನಿಧಿಸಿರುತ್ತಾರೆ)**

ವಿರುದ್ಧ

**ಚಂದ್ರಶೇಖರ ತಂದೆ ಶ್ರೀನಿವಾಸ,**
ಸುಮಾರು 38 ವರ್ಷ,
ವೃತ್ತಿ: ಚಾಲಕ
ವಾಸ: ಅತ್ತಿಮಗ್ಗೆ ಗ್ರಾಮ,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

... ಆರೋಪಿ

PRASANNAKUMAR C
Digitally signed by PRASANNAKUMAR C
Date: 2026.04.02 16:22:16 +0530

**(ಆರೋಪಿತನ ಪರವಾಗಿ ಶ್ರೀ ದೇವರಾಜು ಜಿ, ವಕೀಲರು ಪ್ರತಿನಿಧಿಸಿರುತ್ತಾರೆ.)**

| | | |
|---|---|---|
| ಕೃತ್ಯ ನಡೆದ ದಿನಾಂಕ | : | 11.10.2022 |
| ಯಾವ ಕಲಂ.ಗಳಡಿಯಲ್ಲಿ ಆರೋಪಣೆ ಮಾಡಲಾಗಿದೆ | : | ಭಾರತೀಯ ದಂಡ ಸಂಹಿತೆ ಕಲಂ.279, 304(ಎ) |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 20.09.2024 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | | 18.02.2026 |
| ತೀರ್ಪು ಘೋಷಣೆಯಾದ ದಿನಾಂಕ | : | 01.04.2026 |
| ಆರೋಪಿತರ ಹೇಳಿಕೆ | : | ತಪ್ಪು ಮಾಡಿಲ್ಲ |
| ನ್ಯಾಯಾಲಯದ ಅಭಿಪ್ರಾಯ | : | ಆರೋಪಿಯನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ |

**(ಪ್ರಸನ್ನ ಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಹೊಸದುರ್ಗ.**

**** ತೀರ್ಪು****

ಹೊಸದುರ್ಗ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರು ಮೇಲ್ಕಂಡ ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 279 ಮತ್ತು 304(ಎ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧಗಳನ್ನು ಎಸಗಿರುತ್ತಾರೆಂದು ಆರೋಪಿಸಿ ಅವರ ವಿರುದ್ಧ ಅಂತಿಮ ದೋಷಾರೋಪಣಾ ವರದಿಯನ್ನು ಸಲ್ಲಿಸಿರುತ್ತಾರೆ.

**ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

2. ದಿನಾಂಕಃ 11.10.2022 ರಂದು ಬೆಳಿಗ್ಗೆ 6.00 ಗಂಟೆ ಸಮಯದಲ್ಲಿ ಹೊಸದುರ್ಗ ತಾಲ್ಲೂಕು ಲಕ್ಕೀಹಳ್ಳಿ ಗೇಟ್ ನಿಂದ ಲಕ್ಕೀಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಆರೋಪಿಯು ಕೆಎ-16-ಎಕ್ಸ್-7438 ನೇ ಮೋಟಾರ್ ಸೈಕಲ್ ವಾಹನದಲ್ಲಿ ಹಿಂಬದಿ ಸೀಟಿನಲ್ಲಿ ಅವರ ಮಾವ ಶಂಕ್ರಪ್ಪ ತಂದೆ ಬಾನಪ್ಪ ರವರನ್ನು ಕೂರಿಸಿಕೊಂಡು ಅತಿವೇಗ ಮತ್ತು

ಅಜಾಗರೂಕತೆಯಿಂದ ಚಾಲನೆಮಾಡಿಕೊಂಡು ಬಂದು ಹಂಪ್ಸ್ ಹತ್ತಿರ ಒಂದೇ ಬಾರಿ ಬ್ರೇಕ್ ಹಾಕಿದ್ದರಿಂದ ನಿಯಂತ್ರಣ ತಪ್ಪಿ ಮೋಟಾರ್ ಸೈಕಲ್ ಸಮೇತ ರಸ್ತೆಯ ಮೇಲೆ ಬಿದ್ದ ಪರಿಣಾಮ ಹಿಂಬದಿ ಸೀಟಿನಲ್ಲಿ ಕುಳಿತಿದ್ದ ಶಂಕ್ರಪ್ಪರವರು ಕೆಳಗೆ ಬಿದ್ದು ಅವರ ತಲೆಗೆ, ಮೈಕೈಗೆ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿ ಹೊಸದುರ್ಗ ಸರ್ಕಾರಿ ಆಸ್ಪತ್ರೆಗೆ ತೋರಿಸಿ ನಂತರ ವೈದ್ಯರ ಸಲಹೆಯ ಮೇರೆಗೆ ಶಿವಮೊಗ್ಗ, ಮೆಗ್ಗಾನ್, ನಾರಾಯಣ ಹೃದಯಾಲಯ ಮತ್ತು ಮಂಗಳೂರಿನ ವೆನ್ ಲಾಖ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದರೂ ಸಹಾ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 12.10.2022 ರಂದು ರಾತ್ರಿ 11.45 ಗಂಟೆ ಸಮಯದಲ್ಲಿ ಮೃತಪಟ್ಟಿರುವುದು ಈ ಪ್ರಕರಣದ ಸಾರಾಂಶವಾಗಿರುತ್ತದೆ.

3. ಪ್ರಸ್ತುತ ಪ್ರಕರಣದಲ್ಲಿ ದಿನಾಂಕಃ 12.10.2022 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಪಿರ್ಯಾದುದಾರರು/ಚಾಸಾ-1 ರವರು ಖುದ್ದು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಚಾಸಾ-13 ನಿಂಗರಾಜು ಆರ್ ರವರು ಸ್ವೀಕರಿಸಿ ಠಾಣಾ ಮೊಕ್ಕದ್ದಮೆ ಸಂಃ 415/2022 ರಂತೆ ಪ್ರಕರಣವನ್ನು ದಾಖಲು ಮಾಡಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತಾರೆ. ಮುಂದಿನ ತನಿಖೆಗಾಗಿ ಚಾಸಾ-14 ಮಂಜುನಾಥ ಕೆ.ಬಿ ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತಾರೆ. ಚಾಸಾ-14 ರವರು ವಾಹನ ಪರಿಶೀಲನಾ ಪಂಚನಾಮೆ ಜರುಗಿಸಿ ಹಾಗೂ ಶವ ತನಿಖಾ ಪಂಚನಾಮೆ ಕ್ರಮ ಜರುಗಿಸಿ ನಂತರ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-15 ರವರಿಗೆ ವಹಿಸಿಕೊಟ್ಟಿರುತ್ತಾರೆ. ಚಾಸಾ-15 ಎಂ.ಡಿ.ಫೈಜುಲ್ಲಾ ರವರು ಮೃತ ಶಂಕ್ರಪ್ಪ ರವರ ಪಿ.ಎಂ.ವರದಿ ಪಡೆದು, ವಾಹನದ ಮಾಲೀಕರಿಂದ ಇಂಡೆಮಿನಿಟಿ ಬಾಂಡ್ ಪಡೆದು ವಾಹನವನ್ನು ಅವರ ವಶಕ್ಕೆ ನೀಡಿ ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-16 ರವರಿಗೆ ವಹಿಸಿಕೊಟ್ಟಿರುತ್ತಾರೆ. ಚಾಸಾ-16 ಎನ್.ತಿಮ್ಮಣ್ಣ ರವರು ಐ.ಎಂ.ವಿ.ಆಕ್ಟ್ ಕಲಂ 133 ರಡಿ ಕೆಎ-16-ಎಕ್ಸ್-7438

ರ ಬೈಕಿನ ದಾಖಲೆಯನ್ನು ಹಾಜರು ಪಡಿಸುವಂತೆ ವಾಹನ ಮಾಲೀಕರಾದ ಆರೋಪಿ ಚಂದ್ರಶೇಖರ್ ರವರಿಗೆ ನೋಟೀಸ್ ನೀಡಿ ಸದರಿಯವರ ಉತ್ತರವನ್ನು ಪಡೆದು, ಆರೋಪಿಯ ದಸ್ತಗಿರಿ ಕ್ರಮ ಜರುಗಿಸಿ ಆರೋಪಿಯಿಂದ ಜಾಮೀನು ಭದ್ರತಾ ಮುಚ್ಚಳಿಕೆ ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಿ ತನಿಖೆ ಮುಕ್ತಾಯಗೊಂಡ ನಂತರ ಆರೋಪಿಯ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ಆರೋಪಿತನ ವಿರುದ್ಧ ದೋಷಾರೋಪಣೆ ಪತ್ರವನ್ನು ಸಲ್ಲಿಸಿದ ನಂತರ ದೋಷಾರೋಪಣಾ ಪತ್ರದ ಆಧಾರದ ಮೇಲೆ ಭಾರತೀಯ ದಂಡ ಸಂಹಿತೆ ಕಲಂ. 279 ಮತ್ತು 304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ. 190(1) (ಬಿ) ರಡಿಯಲ್ಲಿ ಸಂಜ್ಞೆ ತೆಗೆದುಕೊಂಡು ಪ್ರಕರಣವನ್ನು ದಾಖಲಿಸಿಕೊಳ್ಳಲಾಯಿತು. ನಂತರ ಆರೋಪಿಗೆ ನ್ಯಾಯಾಲಯದಿಂದ ಸಮನ್ಸ್ ಹೊರಡಿಸಲಾಯಿತು.

5. ಆರೋಪಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ. 207 ರಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಲಾಯಿತು. ನಂತರ ಆರೋಪಿಯ ಮೇಲೆ ಹೊರಿಸಿದ ಆಪಾದನೆಗಳನ್ನು ಓದಿ ಹೇಳಲಾಗಿ ಆರೋಪಿತನು ತಾನು ತಪ್ಪು ಮಾಡಿಲ್ಲವೆಂದು ಮತ್ತು ತನ್ನ ಪರ ಪ್ರತಿರಕ್ಷೆ ಇರುತ್ತದೆ ಎಂದು ಹೇಳಿ, ತನ್ನ ಮೇಲಿನ ಆರೋಪಗಳನ್ನು ಅಲ್ಲಗಳೆದಿದ್ದು, ವಿಚಾರಣೆ ಆಗಬೇಕೆಂದು ನಿವೇದಿಸಿಕೊಂಡಿರುತ್ತಾರೆ.

6. ಅದರಂತೆ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ನಿರ್ಣಯಕ್ಕೆ ಉದ್ಭವಿಸುತ್ತದೆ.

1. ದಿನಾಂಕಃ 11.10.2022 ರಂದು ಬೆಳಿಗ್ಗೆ 6.00 ಗಂಟೆ ಸಮಯದಲ್ಲಿ ಹೊಸದುರ್ಗ ತಾಲ್ಲೂಕು ಲಕ್ಕಿಹಳ್ಳಿ

ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಆರೋಪಿಯು ಕೆಎ-16-ಎಕ್ಸ್-7438 ನೇ ಮೋಟಾರ್ ಸೈಕಲ್ ವಾಹನದಲ್ಲಿ ಶಂಕ್ರಪ್ಪ ರವರನ್ನು ಕೂರಿಸಿಕೊಂಡು ಅತಿವೇಗ ಅಥವಾ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯಲ್ಲಿದ್ದ ಹಂಪ್ಸ್ ಹತ್ತಿರ ಒಂದೇ ಬಾರಿ ಬ್ರೇಕ್ ಹಾಕಿ ಮಾನವ ಜೀವಕ್ಕೆ ಅಪಾಯವಾಗುವಂತೆ ಅಪಘಾತ ಪಡಿಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂಃ 279 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿ ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

2. ಎರಡನೇಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯು ಕೆಎ-16-ಎಕ್ಸ್-7438 ನೇ ಮೋಟಾರ್ ಸೈಕಲ್ ವಾಹನವನ್ನು ಅತಿವೇಗ ಅಥವಾ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯಲ್ಲಿದ್ದ ಹಂಪ್ಸ್ ಹತ್ತಿರ ಒಂದೇ ಬಾರಿ ಬ್ರೇಕ್ ಹಾಕಿದ್ದರ ಪರಿಣಾಮ ಹಿಂಬದಿಯಲ್ಲಿ ಸೀಟಿನಲ್ಲಿ ಕುಳಿತಿದ್ದ ಶಂಕ್ರಪ್ಪ ರವರು ರಸ್ತೆಯ ಮೇಲೆ ಬಿದ್ದ ಪರಿಣಾಮ ಅವರ ತಲೆಗೆ ಮೈಕೈಗೆ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿದ್ದು ಹೊಸದುರ್ಗ ಸರ್ಕಾರಿ ಆಸ್ಪತ್ರೆಗೆ ತೋರಿಸಿ ನಂತರ ವೈದ್ಯರ ಸಲಹೆಯ ಮೇರೆಗೆ ಶಿವಮೊಗ್ಗ ಮೆಗ್ಗಾನ್, ನಾರಾಯಣ ಹೃದಯಾಲಯ ಮತ್ತು ಮಂಗಳೂರಿನ ವೆನ್ ಲಾಖ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದರೂ ಚಿಕಿತ್ಸೆ ಫಲಕಾರಿಯಾಗದೇ

ದಿನಾಂಕ 12.10.2022 ರಂದು ರಾತ್ರಿ 11.45 ಗಂಟೆ ಸಮಯದಲ್ಲಿ ಮೃತಪಟ್ಟಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿ ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

3. ಯಾವ ಆದೇಶ?

7. ಅಭಿಯೋಜನೆಯವರು ಆರೋಪಿತನ ಮೇಲೆ ಹೊರಿಸಿದ ಆರೋಪಗಳನ್ನು ರುಜುವಾತುಮಾಡುವ ಸಲುವಾಗಿ ಸಾಕ್ಷಿ ವಿಚಾರಣೆಗೆ ಗೊತ್ತು ಮಾಡಲಾಗಿ ದೋಷರೋಪಣೆ ಪಟ್ಟಿಯಲ್ಲಿರುವ ಚಾಸಾ-1 ರಿಂದ 16 ರವರ ಪೈಕಿ, ಚಾಸಾ-1, 7, 8, 9, 14, 13, 15 ಮತ್ತು 16 ರವರನ್ನು ಕ್ರಮವಾಗಿ ಅಸಾ-1 ರಿಂದ 8 ಎಂದು ಅಭಿಯೋಜನೆಯ ಪರವಾಗಿ ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಿರುತ್ತಾರೆ. ಸದರಿ ಸಾಕ್ಷಿದಾರರ ಕಡೆಯಿಂದ ನಿಪಿ-1 ರಿಂದ 5, 9 ರಿಂದ 17 ರಂತೆ ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು. ಸಾಕ್ಷ್ಯ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಮತ್ತು ಆರೋಪಿ ಹಾಗೂ ಆರೋಪಿಯ ಪರ ವಕೀಲರು ನೀಡಿದ ಸಮ್ಮತಿ ಮೇರೆಗೆ ಅಭಿಯೋಜನೆಯವರು ಚಾಸಾ-2 ರಿಂದ 6, 10 ರಿಂದ 12 ರವರ ಸಾಕ್ಷ್ಯವನ್ನು ಕೈಬಿಟ್ಟಿರುತ್ತಾರೆ. ಅದರಂತೆ ಸಮ್ಮತಿ ಮೇರೆಗೆ ನಿಪಿ-6 ರಿಂದ 8 ರ ದಾಖಲೆಗಳನ್ನು ಗುರುತಿಸಲಾಗಿದೆ.

8. ಅಭಿಯೋಜನೆಯ ಪರವಾಗಿ ಸಾಕ್ಷಿಗಳ ವಿಚಾರಣೆಯ ಮುಕ್ತಾಯದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲ.313 ರಡಿಯಲ್ಲಿ ಪ್ರಶ್ನೆಗಳನ್ನು ರಚಿಸಿ ಆರೋಪಿಯ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ಆರೋಪಿತನು

ಎಲ್ಲಾ ಪ್ರಶ್ನೆಗಳಿಗೆ ತನ್ನ ಹೇಳಿಕೆಗಳಲ್ಲಿ ಸುಳ್ಳು ಎಂದು ಉತ್ತರಿಸಿರುತ್ತಾರೆ.

9. ಆರೋಪಿತನು ತನ್ನ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ ಹಾಗೂ ತನ್ನ ಪರವಾಗಿ ಯಾವುದೇ ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿರುವುದಿಲ್ಲ.

10. ವಾದಗಳನ್ನು ಆಲಿಸಲಾಯಿತು. ಈ ಪ್ರಕರಣದ ಕಡತ ಹಾಗೂ ಸಾಕ್ಷಿದಾರರ ಸಾಕ್ಷ್ಯವನ್ನು ಹಾಗೂ ಲಭ್ಯವಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿದೆ.

11. ಅಭಿಯೋಜನೆಯ ಪರ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯಗಳನ್ನು ಆಧರಿಸಿ, ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶಃ 1 ಮತ್ತು 2 - ನಕಾರಾತ್ಮಕವಾಗಿ
ಅಂಶಃ 3 - ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗೋಸ್ಕರ

## :: ಕಾರಣಗಳು ::

**12. ಅಂಶಃ 1 ಮತ್ತು 2** - ಈ ಎರಡು ಅಂಶಗಳು ಪರಸ್ಪರ ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಸಾಕ್ಷ್ಯದ ವಿಶ್ಲೇಷಣೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಈ ಎರಡೂ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

13. ಚಾಸಾ-1 ನವೀನ ರವರು ಫಿರ್ಯಾದುದಾರಾಗಿದ್ದು ಅವರನ್ನು ಅಸಾ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಅಸಾ-1 ರವರ ಮೂಲಕ ದೂರನ್ನು ನಿಪಿ-1 ಹಾಗೂ ಅವರ ಸಹಿಯನ್ನು ನಿಪಿ-1(ಎ) ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

14. ಚಾಸಾ-7 ಕರಿಯಪ್ಪ ರವರು ಕೃತ್ಯ ಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು ಅವರನ್ನು ಅಸಾ-2 ಎಂದು ವಿಚಾರಣೆಗೆ ಒಳಪಡಿಸಿ ಅವರ ಮೂಲಕ ನಿಪಿ-2 ಕೃತ್ಯ ಸ್ಥಳ ಪರಿಶೀಲನಾ ಪಂಚನಾಮೆ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-2(ಎ), ನಿಪಿ-3 ನಕಾಶೆ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-3(ಎ), ನಿಪಿ-4 ಫೋಟೋ, ನಿಪಿ-5 ಪಂಚನಾಮೆ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-5(ಎ) ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

15. ಚಾಸಾ-8 ದಾಸಪ್ಪ ರವರು ಕೃತ್ಯ ಸ್ಥಳ ಪಂಚನಾಮೆ ಹಾಗೂ ವಾಹನ ಪರಿಶೀಲನಾ ಪಂಚನಾಮೆ ಸಾಕ್ಷಿದಾರರಾಗಿದ್ದು ಅವರನ್ನು ಅಸಾ-3 ಎಂದು ವಿಚಾರಣೆಗೆ ಒಳಪಡಿಸಿ ಅವರ ಮೂಲಕ ನಿಪಿ-2, 3 ಮತ್ತು 5 ದಾಖಲೆಗಳಲ್ಲಿರುವ ಅವರ ಸಹಿಗಳನ್ನು ನಿಪಿ-2(ಬಿ), ನಿಪಿ-3(ಬಿ), ನಿಪಿ-5(ಬಿ) ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

16. ಚಾಸಾ-9 ಆಶಾ ರವರು ಕೃತ್ಯ ಸ್ಥಳ ಪಂಚನಾಮೆ ಹಾಗೂ ಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು ಅವರನ್ನು ಅಸಾ-4 ಎಂದು ವಿಚಾರಣೆಗೆ ಒಳಪಡಿಸಿ ಅವರ ಮೂಲಕ ನಿಪಿ-2, 3 ಮತ್ತು 5 ದಾಖಲೆಗಳಲ್ಲಿರುವ ಅವರ ಸಹಿಗಳನ್ನು ನಿಪಿ-2(ಸಿ), ನಿಪಿ-3(ಸಿ), ನಿಪಿ-5(ಸಿ) ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

17. ಚಾಸಾ-5 ಕೆ.ಬಿ.ಮಂಜುನಾಥ ರವರು ಕೃತ್ಯ ನಡೆದ ಸ್ಥಳ ಪಂಚನಾಮೆ ಹಾಗೂ ವಾಹನ ಪರಿಶೀಲನಾ ಪಂಚನಾಮೆ ಹಾಗೂ ಶವ ತನಿಖಾ ಪಂಚನಾಮೆ ಕ್ರಮ ಜರುಗಿಸಿದ ಪೊಲೀಸ್ ಅಧಿಕಾರಿಯಾಗಿದ್ದು ಅವರನ್ನು ಅಸಾ-5 ಎಂದು ವಿಚಾರಣೆಗೆ ಒಳಪಡಿಸಿ ಅವರ ಮೂಲಕ ನಿಪಿ-6 ಶವ ಪರೀಕ್ಷಾ ವರದಿ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-6(ಎ), ನಿಪಿ-9 ಚಾಸಾ-5 ರವರ ಹೇಳಿಕೆ ಹಾಗೂ ಸದರಿ

ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-9(ಎ), ನಿಪಿ-10 ಚಾಸಾ-6 ರವರ ಹೇಳಿಕೆಯನ್ನು ನಿಪಿ-10 ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-10(ಎ), ನಿಪಿ-2, 3 ಮತ್ತು 5 ರ ದಾಖಲೆಯಲ್ಲಿರುವ ಅವರ ಸಹಿಗಳನ್ನು ನಿಪಿ-2(ಡಿ), 3(ಡಿ) ಮತ್ತು 5(ಡಿ) ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

18. ಚಾಸಾ-13 ನಿಂಗರಾಜು ಆರ್ ರವರು ಪಿರ್ಯಾದುದಾರರಿಂದ ದೂರು ಪಡೆದು ಪ್ರಕರಣ ದಾಖಲಿಸಿಕೊಂಡ ಸಾಕ್ಷಿದಾರರಾಗಿದ್ದು ಅವರನ್ನು ಅಸಾ-6 ಎಂದು ವಿಚಾರಣೆಗೆ ಒಳಪಡಿಸಿ ಅವರ ಮೂಲಕ ನಿಪಿ-1 ಮತ್ತು 11 ದಾಖಲೆಗಳಲ್ಲಿರುವ ಅವರ ಸಹಿಗಳನ್ನು ನಿಪಿ-1(ಬಿ), ನಿಪಿ-11 ಪ್ರಥಮ ವರ್ತಮಾನ ವರದಿ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-11(ಎ) ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

19. ಚಾಸಾ-15 ಎಂ.ಡಿ ಫೈಜುಲ್ಲಾ ರವರು ಚಾಸಾ-14 ರವರಿಂದ ಪ್ರಕರಣದ ಕಡತವನ್ನು ಪಡೆದು ಭಾಗಶಃ ತನಿಖೆ ನಡೆಸಿದ ಸಾಕ್ಷಿದಾರರಾಗಿದ್ದು ಅವರನ್ನು ಅಸಾ-7 ಎಂದು ವಿಚಾರಣೆಗೆ ಒಳಪಡಿಸಿ ಅವರ ಮೂಲಕ ನಿಪಿ-7 ರ ದಾಖಲೆಯಲ್ಲಿರುವ ಅವರ ಸಹಿಗಳನ್ನು ನಿಪಿ-7(ಎ), ನಿಪಿ-12 ಆರೋಪಿ ಬರೆದು ಕೊಟ್ಟ ಇಂಡಿಮಿನಿಟಿ ಬಾಂಡ್ ನ್ನು ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-12 (ಎ) ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

20. ಚಾಸಾ-16 ತಿಮ್ಮಣ್ಣ ಎನ್ ರವರನ್ನು ಅಸಾ-8 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು ಸದರಿಯವರು ತನಿಖೆಯನ್ನು ಪೂರೈಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ಸಾಕ್ಷಿದಾರರಾಗಿದ್ದು ಅವರ ಮೂಲಕ ನಿಪಿ-13 ಐ.ಎಂ.ವಿ ಆಕ್ಟ್ ಕಲಂ 133 ರಡಿಯಲ್ಲಿ ನೀಡಿದ ನೋಟೀಸ್ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-

13(ಎ), ನಿಪಿ-14 ಆರೋಪಿಯ ಉತ್ತರ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-14(ಎ), ನಿಪಿ-15 ದಸ್ತಗಿರಿ ಜ್ಞಾಪನ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-15(ಎ) ಮತ್ತು 15(ಬಿ), ನಿಪಿ-16 ದಸ್ತಗಿರಿ ನಿಯಮ ಪಾಲನೆ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-16(ಎ), ನಿಪಿ-17 ಬಂಧ ಪತ್ರ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-17(ಎ) ಎಂದು ನಿಶಾನೆಗೆ ಗುರುತಿಕೊಂಡಿರುತ್ತಾರೆ.

21. ಆರೋಪಿ ಪರ ವಕೀಲರ ಸಮ್ಮತಿ ಮೇರೆಗೆ ಶವತನಿಖಾ ವರದಿಯನ್ನು ನಿಪಿ-6 ಎಂದು, ಶವಪರಿಕ್ಷಾ ವರದಿಯನ್ನು ನಿಪಿ-7 ಎಂದು ಮತ್ತು ವಾಹನ ತಪಾಸಣಾ ವರದಿಯನ್ನು ನಿಪಿ-8 ಎಂದು ನಿಶಾನೆಗೆ ಗುರುತಿಸಲಾಗಿದೆ.

22. ಹೀಗಿರುವಾಗ, ಅಸಾ.1 ಫಿರ್ಯಾದುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮೃತ ಶಂಕರಪ್ಪ ರವರು ತನ್ನ ಮಾವನಾಗಬೇಕು, ಆರೋಪಿ ತನ್ನ ಅಣ್ಣನೆಂದು, ಸದರಿ ಶಂಕ್ರಪ್ಪ ರವರು ಅಪಘಾತದಲ್ಲಿ ಮರಣ ಹೊಂದಿರುತ್ತಾರೆ, ಸುಮಾರು 2 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆಂದು, ನಿಖರವಾದ ದಿನಾಂಕ ನೆನಪಿಲ್ಲವೆಂದು, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆಂದು ತನಗೆ ಗೊತ್ತಿಲ್ಲವೆಂದು ನಿಪಿ-1 ರ ದಾಖಲೆಯಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲವೆಂದು ಅಭಿಯೋಜನೆಯವರ ಪ್ರಕರಣಕ್ಕೆ ವಿರುದ್ದವಾದ ಸಾಕ್ಷ್ಯವನ್ನು ನುಡಿದಿರುತ್ತಾರೆ.

23. ಅಸಾ.2 ಕರಿಯಪ್ಪ ರವರು ಕೃತ್ಯ ಸ್ಥಳ ಪರಿಶೀಲನಾ ಪಂಚನಾಮೆ ಸಾಕ್ಷಿದಾರರಾಗಿದ್ದು ಅವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ಪರಿಚಯವಿರುವುದಿಲ್ಲವೆಂದು, ನಿಪಿ-2 ಮತ್ತು 3 ರ ದಾಖಲೆಯಲ್ಲಿರುವ

ವಿಚಾರಗಳು ತನಗೆ ಗೊತ್ತಿಲ್ಲವೆಂದು, ನಿಪಿ-4 ರ ಫೋಟೋವನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಯಿತು ಎಂದು ತನಗೆ ಗೊತ್ತಿಲ್ಲ ಹಾಗೂ ವಾಹನ ಪರಿಶೀಲನಾ ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲವೆಂದು, ಪೊಲೀಸರು ತನ್ನ ಸಮಕ್ಷಮ ಯಾವುದೇ ಸ್ಥಳ ಮತ್ತು ವಾಹನ ಪರಿಶೀಲನಾ ಪಂಚನಾಮೆ ಮಾಡಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

24. ಅಸಾ.3 ದಾಸಪ್ಪ ಮತ್ತು ಅಸಾ-4 ಆಶಾ ರವರು ಸಹಾ ಕೃತ್ಯ ಸ್ಥಳ ಮತ್ತು ವಾಹನ ಪರಿಶೀಲನಾ ಪಂಚನಾಮೆ ಸಾಕ್ಷಿದಾರರಾಗಿದ್ದು ಅವರು ತಮ್ಮ ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ಪರಿಚಯವಿರುವುದಿಲ್ಲವೆಂದು, ನಿಪಿ- ಮತ್ತು 3 ರ ವಿಚಾರಗಳು ತಮಗೆ ಗೊತ್ತಿಲ್ಲವೆಂದು, ಸದರಿ ದಾಖಲೆಗಳಿಗೆ ಸುಮಾರು 2 ವರ್ಷಗಳ ಹಿಂದ ಸಹಿ ಮಾಡಿರುವುದಾಗಿ, ನಿಪಿ-4 ರ ಫೋಟೋವನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಯಿತು ಎಂದು ತನಗೆ ಗೊತ್ತಿಲ್ಲವೆಂದು, ನಿಪಿ-5 ರ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತಮಗೆ ಗೊತ್ತಿಲ್ಲವೆಂದು, ಪೊಲೀಸರು ತಮ್ಮ ಸಮಕ್ಷಮ ಯಾವುದೇ ಸ್ಥಳ ಮತ್ತು ವಾಹನ ಪಂಚನಾಮೆ ಮಾಡಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

25. ಹೀಗಿರುವಾಗ ಸದರಿ ಅಸಾ-1 ರಿಂದ 4 ರವರು ತಮ್ಮ ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದ ಸಾಕ್ಷ್ಯವನ್ನು ಗಮನಿಸಿದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿಕೊಂಡು ವಿವರವಾದ ಪಾಟೀ ಸವಾಲಿಗೆ ಒಳಪಡಿಸಿ, ಘಟನೆಗೆ ಹಾಗೂ ದಾಖಲೆಗಳಿಗೆ ಪೂರಕವಾದ ಸೂಚನೆಗಳನ್ನು ಸದರಿ ಸಾಕ್ಷಿದಾರರಿಗೆ ಸೂಚಿಸಿದರೂ ಸಹ ಸದರಿ ಸಾಕ್ಷಿದಾರರು ಅಭಿಯೋಜನೆಯವರ ಸೂಚನೆಗಳನ್ನು ಸ್ಪಷ್ಟವಾಗಿ ತಮ್ಮ ತಮ್ಮ ಪಾಟೀ ಸವಾಲಿನಲ್ಲಿ ಅಲ್ಲಗಳೆದಿರುತ್ತಾರೆ.

26. ಇನ್ನು ಈ ಪ್ರಕರಣದ ಪೋಲೀಸ್ ಇಲಾಖೆಯ ಸಾಕ್ಷಿದಾರರಾದ ಅಸಾ.6 ನಿಂಗರಾಜು ಆರ್ ರವರು ತಮ್ಮ ವಿಚಾರಣಾ ಸಾಕ್ಷ್ಯದಲ್ಲಿ ದಿನಾಂಕ 12.10.2022 ರಂದು ಪ್ರಭಾರದಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಪ್ರಕರಣ ದಾಖಲಿಸಿರುವುದಾಗಿ, ನಂತರ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುವುದಾಗಿ ನಂತರ ಮುಂದಿನ ಕ್ರಮಕ್ಕಾಗಿ ಪ್ರಕರಣದ ಕಡತವನ್ನು ಚಾಸಾ-14 ರವರಿಗೆ ವಹಿಸಿಕೊಟ್ಟಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ವಿವರವಾದ ಪಾಟೀ ಸವಾಲಿಗೆ ಒಳಪಡಿಸಿ ದೂರು ಸ್ವೀಕರಿಸಿದ ಬಗ್ಗೆ ವಿರುದ್ಧವಾದ ಸೂಚನೆಗಳನ್ನು ನೀಡಿದ್ದು ಅದನ್ನು ಅಸಾ-6 ರವರು ಸುಳ್ಳು ಮತ್ತು ಸರಿಯಲ್ಲವೆಂದು ಅಲ್ಲಗಳೆದಿರುತ್ತಾರೆ.

27. ಮುಂದುವರೆದು, ಅಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.10.2022 ರಂದು ಚಾಸಾ-16 ರವರ ಸೂಚನೆ ಮೇರೆಗೆ ಅಪಘಾತದಲ್ಲಿ ಮರಣ ಹೊಂದಿನ ಶಂಕರಪ್ಪ ರವರ ಮೃತ ದೇಹವನ್ನು ಹೊಸದುರ್ಗ ಸರ್ಕಾರಿ ಆಸ್ಪತ್ರೆಗೆ ತಂದಿದ್ದು ಬೆಳಿಗ್ಗೆ 7.30 ಗಂಟೆಗೆ ಹೋಗಿ ಚಾಸಾ-2 ಮತ್ತು 3 ರವರ ಸಮಕ್ಷಮ ಶವತನಿಖೆಯನ್ನು ಮಾಡಿರುವುದಾಗಿ ನಂತರ ದಿನಾಂಕ 14.10.2022 ರಂದು ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-9 ರವರ ತೋರಿಸಿದ ಸ್ಥಳವನ್ನು ಚಾಸಾ-7 ಮತ್ತು 8 ರವರ ಸಮಕ್ಷಮ ಪಂಚನಾಮೆ ಜರುಗಿಸಿ ಕಚ್ಚಾ ನಕಾಶೆಯನ್ನು ತಯಾರಿಸಿರುವುದಾಗಿ ಹಾಗೂ ಅದೇ ದಿನ ಪೊಲೀಸ್ ಠಾಣಾ ಆವರಣದಲ್ಲಿ ಚಾಸಾ-1 ರವರು ತೋರಿಸಿದ ಮೇರೆಗೆ ಚಾಸಾ-7 ಮತ್ತು 8 ರವರ ಸಮಕ್ಷಮ ವಾಹನ ಪರಿಶೀಲನಾ ಪಂಚನಾಮೆಯನ್ನು ಜರುಗಿಸಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ.

28. ಇನ್ನೂ, ಭಾಗಶಃ ತನಿಖೆ ಮುಂದುವರೆಸಿದ ಅಸಾ-7 ಎಂ.ಡಿ.ಫೈಜುಲ್ಲಾ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.10.2022 ರಂದು ಚಾಸಾ-14

ರವರಿಂದ ಕಡತವನ್ನು ಪಡೆದು, ದಿನಾಂಕ 28.10.2022 ರಂದು ಚಾಸಾ-10 ರವರಿಂದ ಮೃತ ಶಂಕರಪ್ಪ ರವರ ಪಿ.ಎಂ.ವರದಿಯ ಪಡೆದು, ದಿನಾಂಕ 03.11.2022 ರಂದು ಪ್ರಕರಣದ ಆರೋಪಿ ಹಾಗೂ ವಾಹನ ಮಾಲೀಕರಾದ ಚಂದ್ರಶೇಖರ್ ರವರಿಂದ ಇಂಡೆಮಿನಿಟಿ ಬಾಂಡ್ ಪಡೆದು ಅವರ ವಶಕ್ಕೆ ವಾಹನವನ್ನು ನೀಡಿರುವುದಾಗಿ ನಂತರ ಪ್ರಕರಣದ ಸಂಪೂರ್ಣ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-16 ರವರಿಗೆ ವಹಿಸಿಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಅರೋಪಿ ಪರ ವಕೀಲರು ವಿವರವಾದ ಪಾಟೀ ಸವಾಲಿಗೆ ಒಳಪಡಿಸಿ ತನಿಖೆ ನಡೆಸಿದ ಬಗ್ಗೆ ವಿರುದ್ಧವಾದ ಸೂಚನೆಗಳನ್ನು ನೀಡಿದ್ದು ಅದನ್ನು ಅಸಾ-5 ಮತ್ತು 7 ರವರು ಸುಳ್ಳು ಮತ್ತು ಸರಿಯಲ್ಲವೆಂದು ಅಲ್ಲಗಳೆದಿರುತ್ತಾರೆ.

29. ಈ ಪ್ರಕರಣದಲ್ಲಿ ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿದ ಪೋಲೀಸ್ ಇಲಾಖೆಯ ಸಾಕ್ಷಿದಾರರಾದ ಅಸಾ.8 ತಿಮ್ಮಣ್ಣ ಎನ್ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 12.07.2023 ರಂದು ಕಡತವನ್ನು ಚಾಸಾ-15 ರವರಿಂದ ಪಡೆದು ಅದೇ ದಿನ ವಾಹನದ ಮಾಲೀಕ/ಆರೋಪಿ ಚಂದ್ರಶೇಖರ ರವರಿಗೆ ಐ.ಎಂ.ವಿ. ಆಕ್ಟ್ ಕಲಂ 133 ರ ಅಡಿಯಲ್ಲಿ ಕೆ.ಎ.16-ಎಕ್ಸ್-7438 ರ ಬೈಕಿನ ದಾಖಲೆಯನ್ನು ಹಾಜರು ಪಡಿಸುವಂತೆ ನೋಟೀಸ್ ನೀಡಿ ಸದರಿಯವರ ಉತ್ತರವನ್ನು ಪಡೆದುಕೊಂಡು, ಅದೇ ದಿನ ಆರೋಪಿಯ ದಸ್ತಗಿರಿ ಕ್ರಮ ಜರುಗಿಸಿ, ಆರೋಪಿಯಿಂದ ಭದ್ರತಾ ಮುಚ್ಚಳಿಕೆ ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಅರೋಪಿ ಪರ ವಕೀಲರು ವಿವರವಾದ ಪಾಟೀ ಸವಾಲಿಗೆ ಒಳಪಡಿಸಿ ಚಾಸಾ-15 ರವರಿಂದ ಕಡತವನ್ನು ಪಡೆದು ತನಿಖೆ ಮುಂದುವರೆಸಿರುವುದು ಸುಳ್ಳು, ಆರೋಪಿಗೆ ಯಾವುದೇ ನೋಟೀಸ್ ನೀಡಿಲ್ಲ, ಅವರ ಹೇಳಿಕೆಯನ್ನು

ದಾಖಲಿಸಿಕೊಂಡಿಲ್ಲ, ಆರೋಪಿಯ ದಸ್ತಗಿರಿ ಕ್ರಮ ಜರುಗಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿಲ್ಲ, ದಾಖಲೆಗಳನ್ನು ಈ ಪ್ರಕರಣಕ್ಕೋಸ್ಕರ ಠಾಣೆಯಲ್ಲಿಯೇ ಸೃಷ್ಟಿ ಮಾಡಿರುತ್ತೀರಿ, ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗಿರುವುದಿಲ್ಲ, ದೊಷಪೂರಿತ ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತೀರುತ್ತೀರಿ ಎಂಬ ಆರೋಪಿ ಪರ ವಕೀಲರ ಪ್ರಶ್ನೆಗಳಿಗೆ ಸುಳ್ಳು ಮತ್ತು ಸರಿಯಲ್ಲವೆಂದು ಅಲ್ಲಗಳೆದಿರುತ್ತಾರೆ.

30. ಸದರಿ ಮೇಲ್ಕಂಡ ಎಲ್ಲಾ ಸಾಕ್ಷಿದಾರರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಸಾ-1 ರವರು ಫಿರ್ಯಾದುದಾರರಾಗಿದ್ದು, ಪ್ರತ್ಯಕ್ಷವಾಗಿ ಅವರು ಅಪಘಾತ ನೋಡಿಲ್ಲವೆಂದು ತಿಳಿಸಿದ್ದು, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದು, ಸದರಿ ಸಾಕ್ಷಿಯು ಆರೋಪಿ ಅಜಾಗರೂಕತೆಯಿಂದ ವಾಹನವನ್ನು ಚಾಲನೆ ಮಾಡಿರುವುದರಿಂದ ಅಪಘಾತ ಸಂಭವಿಸಿರುವ ಬಗ್ಗೆ ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ ಮತ್ತು ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ತನಗೆ ಗೊತ್ತಿಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇನ್ನು ಅಸಾ-2 ರಿಂದ 4 ರವರು ಪಂಚನಾಮೆ ಸಾಕ್ಷಿದಾರರಾಗಿದ್ದು ಅವರೂ ಸಹಾ ಅಭಿಯೋಜನೆಯ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು, ಸದರಿಯವರುಗಳಿಂದ ಯಾವುದೇ ಪೂರಕವಾದ ಸಾಕ್ಷ್ಯಗಳು ಲಭ್ಯವಾಗಿರುವುದಿಲ್ಲ.

31. ಇನ್ನು ಅಸಾ.5 ರಿಂದ 8 ರವರು ಪೋಲೀಸ್ ಇಲಾಖೆಯ ಸಾಕ್ಷಿದಾರರಾಗಿದ್ದು, ಸದರಿಯವರು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪಂಚನಾಮೆ ಪಂಚರಾದ ಅಸಾ.2 ರಿಂದ 4 ರವರ ಸಮಕ್ಷಮ ಜರುಗಿಸಿದ ಬಗ್ಗೆ, ಶವ ಪಂಚನಾಮೆ ಜರುಗಿಸಿದ ಬಗ್ಗೆ, ಶವ ತನಿಖಾ ವರದಿಯುನ್ನು ವೈದ್ಯರಿಂದ ಪಡೆದುಕೊಂಡ ಬಗ್ಗೆ, ಐಎಂವಿ ವರದಿಯನ್ನು ಪಡೆದು ತನಿಖೆ ಮುಕ್ತಾಯಗೊಂಡ ನಂತರ ಅಂತಿಮ ವರದಿಯನ್ನು ಆರೋಪಿತನ ವಿರುದ್ಧ ದಾಖಲಿಸಿರುವ ಬಗ್ಗೆ ನುಡಿದ ಸಾಕ್ಷಿದಾರರಾಗಿದ್ದು, ಸದರಿಯವರ

ಸಾಕ್ಷಿಗಳಿಂದ ಆರೋಪಿತನೇ ಅಪಘಾತದ ಸಮಯದಲ್ಲಿ ಅಪಾದಿತ ವಾಹನವನ್ನು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಹಂಪ್ಸ್ ಬಳಿ ಏಕ್ ದಂ ಬ್ರೇಕ್ ಹಾಕಿದ್ದರಿಂದ ಹಿಂಬದಿಯಲ್ಲಿ ಕುಳಿತಿದ್ದ ಮೃತ ಶಂಕ್ರಪ್ಪ ರವರು ರಸ್ತೆಯ ಮೇಲೆ ಬಿದ್ದ ಪರಿಣಾಮ ಸದರಿಯವರು ತಲೆಗೆ, ಮೈಕೈಗೆ ತೀವ್ರ ಸ್ವರೂಪದ ಗಾಯಗಳಾಗಿ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾರೆ ಎಂದು ಹೇಳಲು ಯಾವುದೇ ಸಮರ್ಪಕ ಸಾಕ್ಷ್ಯಗಳು ನ್ಯಾಯಾಲಯದ ಮುಂದೆ ಇರುವುದಿಲ್ಲ. ಇದರಿಂದ ಈ ಪ್ರಕರಣದ ಆರೋಪಿಯ ಅಜಾಗರೂಕತೆಯಿಂದ ಸದರಿ ಅಪಘಾತವಾಗಿದೆ ಎಂದು ಹೇಳಲು ಸಾಧ್ಯವಿರುವುದಿಲ್ಲ. ಅಲ್ಲದೇ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ರಚಿಸಿದ ಎಲ್ಲಾ ಪ್ರಶ್ನೆಗಳನ್ನು ಆರೋಪಿಯು ಸುಳ್ಳು ಎಂದು ನಿರಾಕರಿಸಿರುತ್ತಾರೆ. ಆರೋಪಿಯಿಂದಲೇ ಅಪಘಾತವು ಸಂಭವಿಸಿರುತ್ತದೆ ಎಂಬುದರ ಬಗ್ಗೆ ಯಾವುದೇ ಸಾಕ್ಷ್ಯ ಲಭ್ಯವಿರುವುದಿಲ್ಲ. ಆದ್ದರಿಂದ ಸಾಕ್ಷಿದಾರರ ಸಾಕ್ಷ್ಯವು ಇಲ್ಲಿ ಅಭಿಯೋಜನೆಯ ಪ್ರಕರಣಕ್ಕೆ ಬೆಂಬಲಿಸಿರುವುದಿಲ್ಲ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಪ್ರಕರಣದ ಪ್ರಮುಖ ಸಾಕ್ಷಿದಾರರೇ ಅಭಿಯೋಜನೆಗೆ ಬೆಂಬಲಿಸದೇ ಇರುವ ಕಾರಣ ಅಭಿಯೋಜನೆಯವರು ಪ್ರಸ್ತುತ ಆರೋಪಿತನ ಮೇಲೆ ಹೊರಿಸಿದ ಆರೋಪಗಳನ್ನು ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದ್ದರಿಂದ ಸದರಿ ಪ್ರಕರಣದಲ್ಲಿ ಸಂಶಯದ ಲಾಭವನ್ನು ನೀಡಿ ಆರೋಪಿತನನ್ನು ನಿರ್ದೋಷಿ ಎಂದು ನಿರ್ಣಯಿಸಿ ಸದರಿ 1 ಮತ್ತು 2 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

32. **ಅಂಶ 3 :** ಅಂಶ-1 ಮತ್ತು 2 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಈ ಕೆಳಕಂಡಂತೆ ನ್ಯಾಯಾಲಯವು ಆದೇಶಿಸಿರುತ್ತದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ಅಧಿಕಾರಯುಕ್ತನಾಗಿ ಆರೋಪಿತನ ವಿರುದ್ಧ ಆರೋಪಿಸಿರುವ ಭಾರತೀಯ ದಂಡ ಸಂಹಿತೆ ಕಲಂ.279 ಮತ್ತು 304(ಎ) ರಡಿ ದಂಡಿಸಲ್ಪಡುವ ಆರೋಪಗಳಿಂದ ಆರೋಪಿತನನ್ನು ದೋಷಮುಕ್ತ ಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ಇನ್ನು 6 ತಿಂಗಳುಗಳ ಕಾಲ ವಿಸ್ತರಿಸಲಾಗಿದೆ.

(ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು, ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ, ದಿನಾಂಕಃ 1 ನೇ ಏಪ್ರಿಲ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

**(ಪ್ರಸನ್ನ ಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಹೊಸದುರ್ಗ.**

## -ಅನುಬಂಧ-

### 1. ಅಭಿಯೋಜನೆಯ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರುಃ

ಅಸಾ-1 - ನವೀನ್ ಕುಮಾರ್

ಅಸಾ-2 - ಕರಿಯಪ್ಪ

ಅಸಾ-3 - ದಾಸಪ್ಪ

ಅಸಾ-4 - ಆಶಾ

ಅಸಾ-5 - ಮಂಜುನಾಥ

ಅಸಾ-6 - ಲಿಂಗರಾಜು

ಅಸಾ-7 - ಎಂ.ಡಿ.ಫೈಜುಲ್ಲಾ

ಅಸಾ-8 - ಎನ್. ತಿಮ್ಮಣ್ಣ

**<u>ಅಭಿಯೋಜನೆಯ ಪರ ಗುರುತಿಸಲಾದ ನಿಶಾನೆಗಳ ಪಟ್ಟಿಃ</u>**

| | |
|---|---|
| ನಿಪಿ-1 | : ದೂರು |
| ನಿಪಿ-1(ಎ) | : ಅಸಾ-1 ರವರ ಸಹಿ |
| ನಿಪಿ-1(ಬಿ) | : ಅಸಾ-6 ರವರ ಸಹಿ |
| ನಿಪಿ-2 | : ಕೃತ್ಯ ಸ್ಥಳ ಪಂಚನಾಮೆ |
| ನಿಪಿ-2(ಎ) | : ಅಸಾ-2 ರವರ ಸಹಿ |
| ನಿಪಿ-2(ಬಿ) | : ಅಸಾ-3 ರವರ ಸಹಿ |
| ನಿಪಿ-2(ಸಿ) | : ಅಸಾ-4 ರವರ ಸಹಿ |
| ನಿಪಿ-2(ಡಿ) | : ಅಸಾ-5 ರವರ ಸಹಿ |
| ನಿಪಿ-3 | : ನಕಾಶೆ |
| ನಿಪಿ-3(ಎ) | : ಅಸಾ-2 ರವರ ಸಹಿ |
| ನಿಪಿ-3(ಬಿ) | : ಅಸಾ-3 ರವರ ಸಹಿ |
| ನಿಪಿ-3(ಸಿ) | : ಅಸಾ-4 ರವರ ಸಹಿ |
| ನಿಪಿ-3(ಡಿ) | : ಅಸಾ-5 ರವರ ಸಹಿ |
| ನಿಪಿ-4 | : ಫೋಟೋ |
| ನಿಪಿ-5 | : ಪಂಚಾನಾಮೆ |
| ನಿಪಿ-5(ಎ) | : ಅಸಾ-2 ರವರ ಸಹಿ |
| ನಿಪಿ-5(ಬಿ) | : ಅಸಾ-3 ರವರ ಸಹಿ |
| ನಿಪಿ-5(ಸಿ) | : ಅಸಾ-4 ರವರ ಸಹಿ |
| ನಿಪಿ-5(ಡಿ) | : ಅಸಾ-5 ರವರ ಸಹಿ |
| ನಿಪಿ-6 | : ಶವಪರೀಕ್ಷಾ ವರದಿ |
| ನಿಪಿ-6(ಎ) | : ಅಸಾ-5 ರವರ ಸಹಿ |
| ನಿಪಿ-7 | : ಶವ ತನಿಖಾ ವರದಿ |
| ನಿಪಿ-7(ಎ) | : ಅಸಾ-7 ರವರ ಸಹಿ |

| | |
|---|---|
| ನಿಪಿ-8 | : ಮೋಟಾರು ವಾಹನ ತಪಾಸಣಾ ವರದಿ |
| ನಿಪಿ-9 | : ಚಾಸಾ-5 ರವರ ಹೇಳಿಕೆ |
| ನಿಪಿ-9(ಎ) | : ಅಸಾ-5 ರವರ ಸಹಿ |
| ನಿಪಿ-10 | : ಚಾಸಾ-6 ರವರ ಹೇಳಿಕೆ |
| ನಿಪಿ-10(ಎ) | : ಅಸಾ-5 ರವರ ಸಹಿ |
| ನಿಪಿ-11 | : ಪ್ರಥಮ ವರ್ತಮಾನ ವರದಿ |
| ನಿಪಿ-11(ಎ) | : ಅಸಾ-6 ರವರ ಸಹಿ |
| ನಿಪಿ-12 | : ಆರೋಪಿ ಬರೆದುಕೊಟ್ಟ ಇಂಡಿಮಿನಿಟಿ ಬಾಂಡ್ |
| ನಿಪಿ-12(ಎ) | : ಅಸಾ-7 ರವರ ಸಹಿ |
| ನಿಪಿ-13 | : ಐ ಎಂ ವಿ ಕಲಂ 133 ರ ಅಡಿಯಲ್ಲಿ ಆರೋಪಿಗೆ ನೀಡಿದ ನೋಟೀಸ್ |
| ನಿಪಿ-13(ಎ) | : ಅಸಾ-8 ರವರ ಸಹಿ |
| ನಿಪಿ-14 | : ಆರೋಪಿ ಉತ್ತರ |
| ನಿಪಿ-14(ಎ) | : ಅಸಾ-8 ರವರ ಸಹಿ |
| ನಿಪಿ-15 | : ದಸ್ತಗಿರಿ ಜ್ಞಾಪನ |
| ನಿಪಿ-15(ಎ) | : ಅಸಾ-8 ರವರ ಸಹಿ |
| ನಿಪಿ-15(ಬಿ) | : ಅಸಾ-8 ರವರ ಸಹಿ |
| ನಿಪಿ-16 | : ದಸ್ತಗಿರಿ ನಿಯಮ ಪಾಲನೆ |
| ನಿಪಿ-16(ಎ) | : ಅಸಾ-8 ರವರ ಸಹಿ |
| ನಿಪಿ-17 | : ಬಂಧ ಪತ್ರ |
| ನಿಪಿ-17(ಎ) | : ಅಸಾ-8 ರವರ ಸಹಿ |

**3. ಆರೋಪಿಯ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರುಃ**

ಇಲ್ಲಾ

**4. ಆರೋಪಿಯ ಪರ ಗುರುತಿಸಲಾದ ನಿಶಾನೆಗಳ ಪಟ್ಟಿಃ**

ಇಲ್ಲಾ

(ಪ್ರಸನ್ನ ಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.